## ಪದ್ಯ -1. ಅನ್ವೇಷಣೆ

- ಡಾ. ಜಿ. ಎಸ್.ಶಿವರುದ್ರಪ್ಪ.

### ಕವಿ ಕಾವ್ಯ ಪರಿಚಯ :

ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಅವರು 1926ರಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು. ಮೈಸೂರು, ಉಸ್ಮಾನಿಯಾ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ| ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಕವಿಯಾಗಿ, ವಿಮರ್ಶಕರಾಗಿ ಪ್ರಸಿದ್ಧರಾಗಿದ್ದಾರೆ. 'ಸೌಂದರ್ಯ ಸಮೀಕ್ಷೆ', 'ದೀಪದ ಹೆಜ್ಜೆ', 'ಸಾಮಗಾನ', 'ಕಾರ್ತೀಕ', 'ಅನಾವರಣ', 'ಚೆಲುವು-ಒಲವು', 'ಗೋಡೆ', 'ತೆರೆದದಾರಿ', 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು', 'ಕಾವ್ಯಾರ್ಥ ಚಿಂತನ' ಇನ್ನು ಮುಂತಾದವು ಇವರ ಪ್ರಮುಖ ಕೃತಿಗಳು. "ಕಾವ್ಯಾರ್ಥ' ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಜೊತೆಗೆ ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಬಿರುದನ್ನೂ ಪಡೆದಿದ್ದಾರೆ. ಇವರು 1992ರಲ್ಲಿ ದಾವಣಗೆರೆಯಲ್ಲಿ ನಡೆದ 71ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರು 2013ರಲ್ಲಿ ನಿಧನರಾದರು. ಪ್ರಸ್ತುತ 'ಅನ್ವೇಷಣೆ' ಕವಿತೆಯನ್ನು ಇವರು 'ಗೋಡೆ' ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ.

### ಪದಗಳ ಅರ್ಥ

ಅನ್ವೇಷಣೆ - ಹುಡುಕು, ಶೋಧಿಸು, ಕದಡು, ಗುರುತಿಸು - ಗೊತ್ತು ಹಚ್ಚು, ಬಂಧನ - ಸೆರೆ, ಕಟ್ಟು

ಅಹಂ - ಗರ್ವ, ಪ್ರತಿಷ್ಠೆ, ಕೋಟೆ - ಕಲ್ಲಿನ ರಕ್ಷಣಾ ಗೋಡೆ, ನಂದನ – ಉದ್ಯಾನವನ

ಹೆಮ್ಮೆ - ಅಭಿಮಾನ, ಹಿರಿಮೆ, ಸಂತೋಷ

### ಅಭ್ಯಾಸ ಪ್ರಶ್ನೆಗಳು

**ಅ) ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

1. ಎಲ್ಲೋ ಹುಡುಕಿದೆ ಇಲ್ಲದ _______ದೇವರ ಗುಡಿಯೊಳಗೆ
2. ಒಳಗಿನ ತಿಳಿಯನು ಕಲಕದೆ ಇದ್ದರೆ __________ನಾಲಗೆಗೆ
3. ಹತ್ತಿರವಿದ್ದೂ _________ನಿಲ್ಲುವೆವು
4. ಎಷ್ಟು ಕಷ್ಟವೋ ___________ಎಂಬುದು ನಾಲ್ಕು ದಿನದ ಈ ಬದುಕಿನಲಿ

**ಉತ್ತರಗಳು : 1) ಕಲ್ಲು ಮಣ್ಣುಗಳ 2) ಅಮೃತ ಸವಿಯಿದೆ**

**3) ದೂರ 4) ಹೊಂದಿಕೆ**

## ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

1) ಕವಿ ಜಿ.ಎಸ್.ಶಿವರುದ್ರಪ್ಪನವರು ಮೊದಲು ದೇವರನ್ನು ಎಲ್ಲಿ ಹುಡುಕಿ ವಿಫಲರಾದರು?

ಉತ್ತರ : ಕವಿ ಜಿ.ಎಸ್.ಶಿವರುದ್ರಪ್ಪನವರು ಮೊದಲು ದೇವರನ್ನು ಕಲ್ಲುಮಣ್ಣುಗಳ ಗುಡಿಯಲ್ಲಿ ಹುಡುಕಿ ವಿಫಲರಾದರು.

2. ನಂದನ ಮತ್ತು ಬಂಧನ ಎಂದರೇನು? ಅವು ಎಲ್ಲಿವೆ?

ಉತ್ತರ : ನಂದನ ಎಂದರೇ ಉದ್ಯಾನವನ, ಬಂಧನ ಎಂದರೇ ಸೆರೆ, ಅದು ನಮ್ಮೊಳಗಿದೆ.

3. ಅಮೃತದ ಸವಿ ನಾಲಗೆಗೆ ಯಾವಾಗ ಸಿಗುತ್ತದೆ?

ಉತ್ತರ : ಅಮೃತದ ಸವಿ ನಾಲಗೆಗೆ ಒಳಗಿನ ತಿಳಿಯನು ಕಲಕದೆ ಇದ್ದರೆ ಸಿಗುತ್ತದೆ.

4. ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?

ಉತ್ತರ : ಮಾನವನಲ್ಲಿ ಅಹಂ ತುಂಬಿದಾಗ ಹತ್ತಿರವಿದ್ದರೂ ದೂರ ನಿಲ್ಲುವವನಂತೆ ವರ್ತಿಸುತ್ತಾನೆ.

## ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:

**1. ಕವಿ ಜಿ.ಎಸ್.ಶಿವರುದ್ರಪ್ಪನವರು ದೇವರನ್ನು ಅನ್ವೇಷಿಸಿದ ಬಗೆ ಹೇಗೆ?**

ಉತ್ತರ : ಕವಿ ಜಿ.ಎಸ್.ಶಿವರುದ್ರಪ್ಪನವರು ದೇವರನ್ನು ಮೊದಲು ಮಾನವರು ನಿರ್ಮಿಸಿದ ಗುಡಿ-ಗೋಪುರಗಳಲ್ಲಿ ಅನ್ವೇಷಿಸಿದರು. ಅಲ್ಲಿ ದೇವರು ಸಿಗದೆ ವ್ಯರ್ಥ ಸಮಯ ಹಾಳಾಯಿತು. ಆದರೆ ಆ ದೇವರು ನಮ್ಮ ಸುತ್ತಲಿನ ನಮ್ಮೊಳಗಿನ ಮನುಷ್ಯರ ಮನುಷ್ಯತ್ವದಲ್ಲಿದೆ, ಅವರ ಪ್ರೀತಿ, ಸ್ನೇಹಗಳ ರೂಪದಲ್ಲಿ ಅದನ್ನು ನಾವು ಕಾಣಬಹುದಾಗಿದೆ ಎಂಬ ಬಗೆಯನ್ನು ಕವಿ ಆನಂತರ ಅರಿತುಕೊಂಡರು.

**2. ಕವಿ ಹೇಳುವಂತೆ ಬದುಕಿನಲ್ಲಿ ಯಾವುದು ಕಷ್ಟ? ಅದನ್ನು ಪಡೆಯುವುದು ಹೇಗೆ?**

ಉತ್ತರ : ಕವಿ ಹೇಳುವಂತೆ ಬದುಕಿನಲ್ಲಿ ಎಲ್ಲೋ ಇರುವ ದೇವರನ್ನು ಹುಡುಕುವುದು, ಎಲ್ಲೋ ಇರುವ ನಂದನವನವನ್ನು ಹುಡುಕುವುದು, ಅಮೃತ ಸವಿಗಾಗಿ ಹಾತೊರೆಯುವುದು, ಹೊಂದಾಣಿಕೆಗಾಗಿ ಪರಿತಪಿಸುವುದು ಕಷ್ಟಕರವಾಗಿದೆ. ಇವುಗಳನ್ನು ಪಡೆಯಲು ಪ್ರೀತಿ ಸ್ನೇಹಗಳ ಗುರುತಿಸಬೇಕು, ಒಳಗಿನ ತಿಳಿಯನು ಅರಿಯಬೇಕು, ನಾಲ್ಕು ದಿನದ ಬದುಕಿನಲ್ಲಿ ಹೊಂದಾಣಿಕೆಯೊಂದಿಗೆ ಎಲ್ಲವೂ ನಮ್ಮೊಳಗೆ ಇದೆ ಎಂದು ಭಾವಿಸಿದಾಗ ಎಲ್ಲವೂ ಪಡೆಯಬಹುದಾಗಿದೆ ಎಂದು ಕವಿ ಹೇಳಿದ್ದಾರೆ.

## ಈ) ಸಂದರ್ಭದೊಡನೆ ವಿವರಿಸಿರಿ:

**1. 'ಪ್ರೀತಿ ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ'**

ಪ್ರಸ್ತುತ ಈ ಮೇಲಿನ ವಾಕ್ಯವನ್ನು **ಜಿ.ಎಸ್.ಶಿವರುದ್ರಪ್ಪ** ಅವರು ಬರೆದಿರುವ - **ಅನ್ವೇಷಣೆ** ಎಂಬ ಗದ್ಯಪಾಠವನ್ನು **ಗೋಡೆ** ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಈ ಮೇಲಿನ ಮಾತನ್ನು ಕವಿಯು ಓದುಗರಿಗೆ ಹೇಳಿದ ಮಾತಾಗಿದೆ:

**ಸಂದರ್ಭ** : ಎಲ್ಲೋ ಇರುವ ದೇವರ ಹುಡುಕಲು ಗುಡಿಗೋಪುರಗಳನ್ನು ಅರಸುವ ಬದಲು ನಮ್ಮ ಸುತ್ತಲಿರುವ ಪ್ರೀತಿ, ಸ್ನೇಹಗಳ ಗುರುತಿಸಿ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**2. 'ಅಮೃತದ ಸವಿಯಿದೆ ನಾಲಗೆಗೆ'**

ಪ್ರಸ್ತುತ ಈ ಮೇಲಿನ ವಾಕ್ಯವನ್ನು **ಜಿ.ಎಸ್.ಶಿವರುದ್ರಪ್ಪ** ಅವರು ಬರೆದಿರುವ - **ಅನ್ವೇಷಣೆ** ಎಂಬ ಗದ್ಯಪಾಠವನ್ನು **ಗೋಡೆ** ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಈ ಮೇಲಿನ ಮಾತನ್ನು ಕವಿಯು ಓದುಗರಿಗೆ ಹೇಳಿದ ಮಾತಾಗಿದೆ.

**ಸಂದರ್ಭ** : ನಾವು ನಮ್ಮೊಳಗಿನ ಅಂತರಾಳವನ್ನು ಕಲಕಿ ರಾಡಿ ಮಾಡದೆ ಇದ್ದರೆ ಅಮೃತದ ಸವಿ ನಾಲಗೆಗೆ ಸಿಗುತ್ತದೆ ಎಂದು ಕವಿ ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ' ಹತ್ತಿರವಿದ್ದೂ ದೂರ ನಿಲ್ಲುವೆವು'**

ಪ್ರಸ್ತುತ ಈ ಮೇಲಿನ ವಾಕ್ಯವನ್ನು **ಜಿ.ಎಸ್.ಶಿವರುದ್ರಪ್ಪ** ಅವರು ಬರೆದಿರುವ **ಅನ್ವೇಷಣೆ** ಎಂಬ ಗದ್ಯಪಾಠವನ್ನು **ಗೋಡೆ** ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ

ಈ ಮೇಲಿನ ಸಾಲನ್ನು ಕವಿಯು ಓದುಗರಿಗೆ ಹೇಳಿದ ಮಾತಾಗಿದೆ.

**ಸಂದರ್ಭ :** ಮನುಷ್ಯರು ತಮ್ಮ ನಡುವಿನ ಅಡ್ಡಗೋಡೆಯಂತೆ ಅಹಂಕಾರವನ್ನು ಬೆಳೆಸಿಕೊಂಡಿದ್ದಾರೆ. ಈ ಅಹಂಕಾರದಿಂದ ಹತ್ತಿರವಿದ್ದೂ ದೂರ ನಿಲ್ಲುವೆವು ನಾವುಗಳು, ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

**ಉ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆಯ್ದು ಬರೆಯಿರಿ:** '

**1. ಕವಿ ಜಿ.ಎಸ್.ಎಸ್. ಅವರು ದೇವರನ್ನು ______________ರೂಪದಲ್ಲಿ ಕಂಡರು.**

ಅ) ಗುಡಿ ಆ) ಕಲ್ಲು ಮಣ್ಣು ಇ) ಪ್ರೀತಿ ಸ್ನೇಹ ಈ) ಕೋಟೆ

**2. ಬದುಕಿನಲ್ಲಿ_____________ ಎಂಬುದು ಕಷ್ಟ ಎಂದು ಕವಿ ಹೇಳುತ್ತಾರೆ.**

ಅ) ಹೊಂದಾಣಿಕೆ ಆ) ಅಹಂ ಇ) ಹಿರಿಮೆ ಈ) ಮೋಹ

**3. ನಮ್ಮೊಳಗಿನ ತಿಳಿಯನು ಕಲಕದೆ ಇದ್ದರೆ ನಾಲಗೆಗೆ____________________ ಇದೆ.**

ಅ) ಹುಳಿ ಆ) ವಿಷ ಇ) ಒಗರು ಈ) ಅಮೃತ

**4. ಅಹಂ ಇರುವ ವ್ಯಕ್ತಿ ಜನರಿಗೆ_________________ ಆಗುತ್ತಾನೆ.**

ಅ) ಉಪಕಾರಿ ಆ) ಹತ್ತಿರ ಇ) ದೂರ ಈ) ಒಳ್ಳೆಯವನು

**ಭಾಷಾಭ್ಯಾಸ**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಗುಡಿ - ದೇವಾಲಯ, ದೇವಸ್ಥಾನ

ಹತ್ತಿರ - ಸಮೀಪ, ಸನಿಹ

ಬಂಧನ - ನೆಲೆ, ಕಟ್ಟು

ಸ್ನೇಹ - ಗೆಳೆತನ, ಮಿತ್ರುತ್ವ

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಪ್ರೀತಿ X ದ್ವೇಷ ದೂರ X ಹತ್ತಿರ ಅಮೃತ X ವಿಷ

ಸಿಹಿ X ಕಹಿ ಕಷ್ಟ X ಸುಖ ಬಂಧ X ನಿರ್ಬಂಧ

## ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

1. **ದೇವರು** - ಮಕ್ಕಳಲ್ಲಿ ದೇವರನ್ನು ಕಾಣಬಹುದಾಗಿದೆ.

2. **ಪ್ರೀತಿಸ್ನೇಹ -** ಮನುಷ್ಯರು ಪ್ರೀತಿಸ್ನೇಹದಿಂದ ಬದುಕಬೇಕು.

3. **ಬಂಧನ** - ಬ್ರಿಟಿಷರ ಬಂಧನದಿಂದ ಭಾರತ ಸ್ವತಂತ್ರವಾಯಿತು.

4**. ಅಮೃತ** - ಅಮೃತಕ್ಕಾಗಿ ದೇವರು ಮತ್ತು ಅಸುರರ ನಡುವೆ ಹೋರಾಟ ನಡೆಯಿತು.

5. **ಹೊಂದಿಕೆ**: . ಜೀವನದಲ್ಲಿ ಹೊಂದಿಕೊಂಡು ಹೋಗುವುದು ಬಹಳ ಮುಖ್ಯವಾಗಿದೆ.

6. **ಅಹಂ** - ಮನುಷ್ಯರ ನಾಶಕ್ಕೆ ಅಹಂ ಕಾರಣವಾಗಿದೆ.

## ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ :

ಹತ್ತಿರವಿದ್ದು = ಹತ್ತಿರ + ಇದ್ದು

ಗುಡಿಯೊಳಗೆ = ಗುಡಿ + ಒಳಗೆ

ಸವಿಯಿದೆ = ಸವಿ + ಇದೆ

ಕಷ್ಟವೋ = ಕಷ್ಟ + ಓ

## ಉ) ಸುಳಿವು ಪದಗಳನ್ನು ಬಳಸಿ ಜೋಡಿ ಪದಗಳನ್ನು ಬರೆಯಿರಿ:

ಉದಾ: ಕಲ್ಲು – ಮಣ್ಣು, ಪ್ರೀತಿ - ಸ್ನೇಹ

ಹೊಲ ಗದ್ದೆ

ಗಿಡಮರ

ಗುಡ್ಡ - ಬೆಟ್ಟ

ಎಡ – ಬಲ

ಹೂವು - ಹಣ್ಣು

ಕಳ್ಳ - ಸುಳ್ಳ

ಮಳೆ - ಬೆಳೆ

ರೀತಿ- ನೀತಿ.